**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 192/2022**

P.W: 1
C.W: 1

**ದಿನಾಂಕ 26.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಯಲ್ಲಮ್ಮ

**ಗಂಡನ ಹೆಸರು** **:** ಲೇಟ್ ದೊಡ್ಡಲಿಂಗಪ್ಪ

**ವಯಸ್ಸು** : 45 ವರ್ಷ

**ವೃತ್ತಿ** : ಕೂಲಿ ಕೆಲಸ

**ವಾಸಸ್ಥಳ** : ಕೂಡಿ ಗ್ರಾಮ, ಮಾನ್ವಿ ತಾಲ್ಲೂಕು,
ರಾಯಚೂರು ಜಿಲ್ಲೆ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ದೊಡ್ಡಲಿಂಗಪ್ಪ ನನ್ನ ಗಂಡ. ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಕೂಲಿ ಕೆಲಸಕ್ಕಾಗಿ ಸುಮಾರು 8 ವರ್ಷಗಳ ಹಿಂದೆ ತುಮಕೂರಿಗೆ ಬಂದಿದ್ದೆವು. ನಾವು ಶೆಟ್ಟಿ ಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಬಯಲು ಜಾಗದಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದೆವು. ನನಗೆ 4 ಜನ ಮಕ್ಕಳು. ಮೊದಲ ಮಗ ಹುಲಿಗೆಮ್ಮ, 2 ನೇ ಮಗ ಉಮೇಶ, , 3 ನೇ ಮಗಳು ಈರಮ್ಮ, 4 ನೇ ಮಗಳು ಚೈತ್ರಾ. ನನ್ನ

ಮಕ್ಕಳಿಗೆವಿವಾಹವಾಗಿಲ್ಲ. ಹುಲಿಗೆಮ್ಮನಿಗೆ 18 ವರ್ಷ, ಉಮೇಶನಿಗೆ 16 ವರ್ಷ ಈರಮ್ಮನಿಗೆ 12 ವರ್ಷ,ಚೈತ್ರನಿಗೆ 9 ವರ್ಷ. ನಮ್ಮೊಂದಿಗೆ ನಮ್ಮ ಚಿಕ್ಕಮ್ಮ ಮತ್ತು ಆಕೆಯ ಮಗ ಮಂಜುನಾಥ , ಮಲ್ಲಯ್ಯ , ಚಾ.ಸಾ.12 ಹನುಮೇಶ, ಚಾ.ಸಾ.13 ಸಿದ್ದ ಒಟ್ಟು 9 ಜನ ನಮ್ಮ ಊರಿನಿಂದ ತುಮಕೂರಿಗೆ ಕೂಲಿ ಕೆಲಸಕ್ಕೆ ಬಂದಿದ್ದೆವು. ಮೊದಲಿಗೆ ನನ್ನ ಯಜಮಾನರು ಗಾರೆ ಕೆಲಸ ಮಾಡುತ್ತಿದ್ದರು. ನಂತರ ಅವರು ಕರೇಕಲ್ಲುಪಾಳ್ಯದ ಗೋಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಯಜಮಾನರು ಓಡಾಡಲು ದ್ವಿ ಚಕ್ರ ವಾಹನವನ್ನು ಬಳಕೆ ಮಾಡುತ್ತಿದ್ದರು. ಸದರಿ ವಾಹನ ಚಾ.ಸಾ. 12 ರವರ ಹನುಮೇಶ ರವರ ಹೆಸರಿನಲ್ಲಿ ಇತ್ತು. ಬೆಳಿಗ್ಗೆ 9.00 ಗಂಟೆಗೆ ಕೂಲಿ ಕೆಲಸಕ್ಕೆ ಹೋದರೆ ಸಂಜೆ 6.00 ಗಂಟೆಗೆ ವಾಪಸ್ ಬರುತ್ತಿದ್ದರು. ಕೂಲಿ ಕೆಲಸಕ್ಕೆ ಹೋಗುವಾಗ ಆಗ ನಮ್ಮೊಂದಿಗೆ ಮಾತನಾಡಲು ಮೊಬೈಲ್ ತೆಗೆದುಕೊಂಡು ಹೋಗುತ್ತಿದ್ದರು.

2. ಮೂರು ವಶಷದ ಹಿಂದೆ ನನ್ನ ಯಜಮಾನರು ರಾತ್ರಿ 8.00 ಗಂಟೆಗೆ ಹಾಲು ತರಲು ನಮ್ಮ ಗುಡಿಸಲಿನಿಂದ ತನ್ನ ಹೋಂಡಾ ಗಾಡಿಯಲ್ಲಿ ಹೋಗಿದ್ದರು. ನಂತರ ವಾಪಸ್ ಮನೆಗೆ ಬಂದಿರಲಿಲ್ಲ. ನಾನು ನನ್ನ ಯಜಮಾನರ ಮೊಬೈಲ್ ಗೆ ಫೋನ್ ಮಾಡಿದ್ದೆ. ಅದರೆ ಅದುಸ್ವಿಚ್ ಆಫ್ ಎಂದು ಬರುತ್ತಿತ್ತು. ನಾನು ನನ್ನ ಸಂಬಂಧಿಕರಿಗೆ ಫೋನ್ ಮಾಡಿದೆ. ಆದರೆ ನನ್ನ ಸಂಬಂಧಿಕರು ನನ್ನ ಯಜಮಾನರು ಬಂದಿರಲಿಲ್ಲ ಎಂದು

ಹೇಳಿದರು. ನಾನು ಸಹಾ ಆತನನ್ನು 3 ದಿನ ಹುಡುಕಾಡಿದೆನು. ಆತ ನನಗೆ ಸಿಕ್ಕಿರಲಿಲ್ಲ. ನಾನು ಜಯನಗರ ಪೋಲೀಸ್ ಠಾಣೆಗೆ ನನ್ನ ಯಜಮಾನರು ಖಾಣೆಯಾದ್ದ ಬಗ್ಗೆ ದೂರು ನೀಡಿದ್ದೇನೆ.

3. ನಾನು ದೂರು ಕೊಟ್ಟ ನಂತರ ಪೋಲೀಸರು ನನ್ನ ಗುಡಿಸಲಿನ ಬಳಿಗೆ ಬಂದಿದ್ದರು. ನನ್ನನ್ನು ನನ್ನ ಯಜಮಾನರ ಬಗ್ಗೆ ವಿಚಾರಿಸಿ ಕೇಳಿಕೊಂಡರು. ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡರು. ಆಗ ನಾನು, ಮಲ್ಲಯ್ಯ, , ರವಿ , ಮಂಜುನಾಥ ಸ್ಥಳದಲ್ಲಿದ್ದೆವು. ಸ್ಥಳದಲ್ಲಿ ಬರವಣಿಗೆ ಮಾಡಿಕೊಂಡರು.

4. ನಾನು ನನ್ನ ಯಜಮಾನರು ಖಾಣೆಯಾದ ಬಗ್ಗೆ ಕೊಟ್ಟ ದೂರಿನ ನಂತರ 43 ರಿಂದ 45 ದಿನಗಳ ನಂತರ ನನ್ನ ಯಜಮಾನರನ್ನು ಲಕ್ಷ್ಮಿ ಮತ್ತು ವೆಂಕಟೇಶ ಕೊಲೆ ಮಾಡಿರುವ ಬಗ್ಗೆ ಚಾ.ಸಾ.3- ಮಲ್ಲಯ್ಯ ಮತ್ತು ಚಾ.ಸಾ.2- ಮಂಜುನಾಥ ನನಗೆ ತಿಳಿಸಿದರು. ನಂತರ ನಾನು ಜಯನಗರ ಪೋಲೀಸ್ ಠಾಣೆಗೆ ಹೋಗಿ ಬೆಳಿಗ್ಗೆ 9.00 ಗಂಟೆಗೆ ದೂರು ನೀಡಿದ್ದೇನೆ. ನನಗೆ ಸಹಿ ಮಾಡಲು ಬರುವುದಿಲ್ಲ, ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಸಾಕ್ಷಿ ದೂರು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತು ಮಾಡಲಾಯಿತು. ಸಾಕ್ಷಿ ತನ್ನ ಹೆಬ್ಬೆಟ್ಟಿನ ಗುರುತನ್ನು ನಿ.ಪಿ.1 ರಲ್ಲಿ ನೋಡಿ ಗುರುತಿಸಿರುತ್ತಾರೆ. ನನ್ನ ಯಜಮಾನರಿಗೆ ಮದ್ಯಪಾನ ಮಾಡಿಸಿ ಆತನ ಮದ್ಯದ ಅಮಲಿನಲ್ಲಿ 1 ನೇ ಆರೋಪಿಯ

ಲಕ್ಷ್ಮಿಯ ಮೇಲೆ ಮಲಗಿದಾಗ 2 ನೇ ಆರೋಪಿ ಹಿಂದಿನಿಂದ ಬಂದು ನನ್ನ ಯಜಮಾನರ ತಲೆಯ ಮೇಲೆ ಕಲ್ಲು ಎತ್ತು ಹಾಕಿ ಕೊಲೆ ಮಾಡಿರುವುದಾಗಿ ತಿಳಿದು ಬಂತು. 1 ನೇ ಆರೋಪಿ ನನ್ನ ಯಜಮಾನರ ಎರಡೂ ಕಾಲುಗಳನ್ನು ಹಿಡಿದುಕೊಂಡಾಗ 2 ನೇ ಆರೋಪಿ ಕಲ್ಲು ಎತ್ತು ಹಾಕಿದರು ಎಂದು ನನಗೆ ತಿಳಿದು ಬಂತು. ನನ್ನ ಯಜಮಾನರು 1 ನೇ ಅರೋಪಿ ಲಕ್ಷ್ಮಿಯ ಜೊತೆ ಅನೈತಿಕ ಸಂಬಂದ ಇತ್ತು. 2 ನೇ ಆರೋಪಿ ವೆಂಕಟೇಶ 1 ನೇ ಆರೋಪಿ ಲಕ್ಷ್ಮಿ ಯೊಂದಿಗೆ ಅನೈತಿಕ ಸಂಬಂದ ಇಟ್ಟು ಕೊಂಡಿದ್ದರು. 1 ಮತ್ತು 2 ನೇ ಆರೋಪಿಯ ಮಧ್ಯೆ ಇದ್ದ ಅನೈತಿಕ ಸಂಬಂದ ವಿಚಾರವನ್ನು ನನ್ನ ಯಜಮಾನರು 1 ನೇ ಆರೋಪಿಯ ತಂದೆಯೊಂದಿಗೆ ಹೇಳಿದ್ದರು. ಆಕೆಯ ತಂದೆ ಗೋಶಾಲೆಯಲ್ಲಿ ನನ್ನ ಯಜಮಾನರೊಂದಿಗೆ ಕೆಲಸ ಮಾಡುತ್ತಿದ್ದರು. 1 ಮತ್ತು 2 ನೇ ಅರೋಪಿಯ ಮಧ್ಯೆ ಇದ್ದ ಅನೈತಿಕ ಸಂಬಂದದ ಕಾರಣ ಅವರಿಬ್ಬರೂ ನನ್ನ ಯಜಮಾನರನ್ನು ಕೊಲೆ ಮಾಡಿರುತ್ತಾರೆ. ಮೈದಾಳದ ರೈಲ್ವೆ ಗೇಟ್ ನ ಬಳಿ ಆರೋಪಿಗಳಿಬ್ಬರೂ ನನ್ನ ಯಜಮಾನರನ್ನು ಕೊಲೆ ಮಾಡಿರುತ್ತಾರೆ. ರಾತ್ರಿ 8.00 ರಿಂದ 11.00 ಗಂಟೆ ಸಮಯದಲ್ಲಿ ನನ್ನ ಯಜಮಾನರ ಕೊಲೆ ಮಾಡಿರುತ್ತಾರೆ.

5. ಇಬ್ಬರು ಆರೋಪಿಗಳು ಕೊಲೆ ಮಾಡಿದ ನಂತರ ನನ್ನ ಯಜಮಾನರನ್ನು ಆತನ ಬೈಕಿನಲ್ಲಿ ನನ್ನ ಯಜಮಾನರನ್ನು ಮಧ್ಯದಲ್ಲಿ ಕೂರಿಸಿಕೊಂಡು ಟೋಲ್ ಗೇಟ್ ನ ಕೆರೆಯ ಬ್ರಿಡ್ಜ್ ನ ಬಳಿಗೆ

ತೆಗೆದುಕೊಂಡು ಹೋಗಿರುತ್ತಾರೆ. ನಂತರ ಆತನ ಮೃತದೇಹವನ್ನು ಬ್ರಿಡ್ಜನ ಕೆಳಗೆ ಬಿಸಾಸಡಿರುತ್ತಾರೆ. ನಂತರ ನನ್ನ ಯಜಮಾನರ ಬೈಕ್ ನ ಬಸವಣ್ಣನ ಕೆರೆಗೆ ಬಿಸಾಡಿರುತ್ತಾರೆ. ನನ್ನ ಯಜಮಾನರ ಮೊಬೈಲ್ ನ್ನು ನೀರಿಗೆ ಬಿಸಾಡಿರುತ್ತಾರೆ. ನಮ್ಮ ಹುಡುಗರಾದ ಮಂಜ, ಮಲ್ಲೇಶ ಮತ್ತು ಹನುಮೇಶ, ರವಿ ನನ್ನ ಯಜಮಾನರ ಮೃತ ದೇಹ ಇದ್ದ ಸ್ಥಳಕ್ಕೆ ಹೋಗಿದ್ದೆವು. ಪೋಲೀಸರು ನನ್ನ ಯಜಮಾನರ ಟವಲ್ ನ್ನು ತಂದು ತೋರಿಸಿದರು. ನಾನು ಪೋಲೀಸರ ಕಚೇರಿಯಲ್ಲಿ ಟವಲ್ ನೋಡಿದ್ದೇನೆ. ನಾನು ಸದರಿ ಟವಲ್ ನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮೊಹರು ಮಾಡಿದ ಬಟ್ಟೆ ಚೀಲದ ಮೇಲೆ ಹಾಕಿರುವ ಮೊಹರು ತೆರೆಯಲು ಅನುಮತಿ ಕೋರಿದ್ದು, ಅನುಮತಿಸಲಾಯಿತು)

ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಒಂದು ಟವಲ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತು ಮಾಡಲಾಯಿತು. ನಾನು ಟವಲ್ ನೋಡಿದಾಗ ಅದರಲ್ಲಿ ರಕ್ತದ ಕಲೆಗಳು ಇತ್ತು. ನಮ್ಮ ಗುಡಿಸಲಿನಿಂದ ಆತ ಹಾಲು ತರಲು ಹೋದಾಗ ಬಿಳಿ ಬಣ್ಣದ ಶರ್ಟ್, ಪಂಚೆ ಮತ್ತು ನಾನು ಈಗ ನೋಡಿದ ಟವಲ್ ನ್ನು ಹಾಕಿಕೊಂಡು ಹೋಗಿದ್ದರು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮೊಹರು ಮಾಡಿದ ಬಟ್ಟೆ ಚೀಲದ ಮೇಲೆ ಹಾಕಿರುವ ಮೊಹರು ತೆರೆಯಲು ಅನುಮತಿ ಕೋರಿದ್ದು, ಅನುಮತಿಸಲಾಯಿತು)

6. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಒಂದು ಶರ್ಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತು ಮಾಡಲಾಯಿತು. ನಾನು ಸದರಿ ಶರ್ಟ ನ್ನು ನೋಡಿದಾಗ ರಕ್ತದ ಕಲೆಗಳು ಆಗಿತ್ತು. 2 ನೇ ಆರೋಪಿ ನಮ್ಮ ಸ್ವಂತ ಊರಿನ ಪಕ್ಕದ ಊರಿನ ವಾಸಿ . ಆತ ಸಹ ನಮ್ಮೊಂದಿಗೆ ಕೂಲಿ ಕೆಲಸಕ್ಕೆ ಬಂದಿದ್ದರು. ನಾನು ಆತನನ್ನು ನೊೀಡಿದರೆ ಗುರುತಿಸಬಲ್ಲೆ, ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಯಜಮಾನರ ಜೊತೆ ಅನೈತಿಕ ಸಂಬಂದ ಹೊಂದಿದ್ದ 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ನಮ್ಮ ಗುಡಿಸಲಿನ ಬಳಿಗೆ ಆಗಾಗ್ಗೆ ಬರುತ್ತಿದ್ದಳು. ಗುಡಿಸಲಿನ ಬಳಿ ವಾಸವಾಗಿದ್ದ ಮಕ್ಕಳನ್ನು ಆಕೆ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದಳು. ನನ್ನ ಯಜಮಾನರ ಬೈಕ್ ನಲ್ಲಿ ಆಕೆ ಅಗಾಗ್ಗೆ ಹೋಗುತ್ತಿದ್ದುನ್ನು ನಾನು ನೋಡಿದ್ದನು. 1 ನೇ ಆರೋಪಿ ಕರೇಕಲ್ಲುಪಾಳ್ಯ ದಲ್ಲಿ ವಾಸವಾಗಿದ್ದಳು. 2 ನೇ ಆರೋಪಿ ನನ್ನ ಗುಡಿಸಲಿನ ಪಕ್ಕದಲ್ಲಿ ವಾಸವಾಗಿದ್ದರು. ನನ್ನ

ಯಜಮಾನರು ಮೃತರಾದ ನಂತರ ನಾನು ನನ್ನ ಸ್ವಂತ ಊರಿನಲ್ಲಿ ವಾಸವಾಗಿದ್ದೇನೆ. ನಾನು ನಮ್ಮ ಊರಿನಲ್ಲಿ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತೇನೆ.

ಈ ಹಂತದಲ್ಲಿ ಮೃತರು ಕಾಣೆಯಾದ ಬಗ್ಗೆ ನೀಡಿದ ದೂರು, ಪ್ರಥಮ ವರ್ತಮಾನ ವರದಿ ಮತ್ತು ಸ್ಥಳ ಪಂಚನಾಮೆ ಕಡತದಲ್ಲಿ ಲಭ್ಯವಿಲ್ಲದ ಕಾರಣ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿುತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.